ಪ್ರಬಂಧ

# ಗಾಳಿಯನು ತಡೆಯೋರು ಯಾರೂ ಇಲ್ಲ...



**ತುರುವೇಕೆರೆ ರವಿಶಂಕರ್**

ಕಲೆ: ಪ್ರವೀಣ್ ಆಚಾರ್ಯ



ಬಾಲ್ಯದಲ್ಲಿ ಅದೇನೂ ಅದು ಅಂಥ ನಾಚಿಕೆಯ ವಿಷಯವಾಗಿರಲಿಲ್ಲ. ಇನ್ನೂ ಒಳ್ಳೇದು ಕೆಟ್ಟದ್ದು ಗೊತ್ತಾಗದೇ ಇರೋ ವಯಸ್ಸು. ಗಪ್ಪನೆ ಮೂಗಿಗೆ ಕಟುವಾಸನೆ ಬಡಿದರೆ ಸಾಕು, ಮೂರ್ನಾಲ್ಕು ಬೆಂಚಿನ ಹುಡುಗರು ಮೂಗು ಮುಚ್ಚಿಕೊಳ್ಳುತ್ತಿದ್ದರು. ಯಾರಪ್ಪಾ ಹೊಸಾ ಬಾಂಬು ಹಾಕಿದ್ದು?... ಅಂತ ಹಿಂದಿನ ಬೆಂಚಿನಿಂದೊಬ್ಬ ಗೊಣಗುತ್ತಿದ್ದ. ಯಾವ್ನೋ ತಂಗಳೂಟ ಮಾಡ್ಕೊಂಡು ಬಂದವ್ನೆ ಕಣ್ಲಾ... ಅಂತ ಇನ್ನೊಬ್ಬ ಆರೋಪಿಸುತ್ತಿದ್ದ. ಮುಖ್ಯವಾಗಿ ಯಾರಿಗೂ ಯಾರ ಮೇಲೂ ಸಿಟ್ಟು ಬರುತ್ತಿರಲಿಲ್ಲ. ಯಾರು ಬಾಂಬು ಹಾಕಿದವರು ಎಂಬುದನ್ನು ಕಂಡು ಹಿಡಿದು ನಾವು ಶಾಣ್ಯಾರಾಗಬೇಕಿರಲಿಲ್ಲ. ಬಹುತೇಕ ಸಂದರ್ಭದಲ್ಲಿ ಬಾಂಬು ಹಾಕಿದವನಾರೆಂದು ಎಲ್ಲರಿಗೂ ಗೊತ್ತಾಗುತ್ತಿತ್ತು ಮತ್ತು ಹಾಕಿದವನೇ ಪದೇ ಪದೇ ಹಾಕುತ್ತಿದ್ದ. ಅವನೂ ನಮ್ಮ ಸ್ನೇಹಿತನೇ ಆಗಿದ್ದರಿಂದ ಸಹಿಸಿಕೊಳ್ಳುವುದೂ ನಮಗೆ ಅಭ್ಯಾಸವಾಗಿತ್ತು. ಕೇವಲ ಇದು ಎರಡು ಮಿನಿಟುಗಳ ಹೊಯ್ದಾಟವಾದ್ದರಿಂದ ಹಂಗಂಗೇ ಸುಮ್ಮನಾಗಿಬಿಡುತ್ತಿದ್ದೆವು.

ಒಮ್ಮೊಮ್ಮೆ ನನ್ನ ಚಡ್ಡಿ ಗೆಳೆಯ ಕುಮಾರನಂಥ ಅತಿ ಸಲುಗೆಯ ಫ್ರೆಂಡುಗಳಿರುತ್ತಿದ್ದರು. ನೋಡ್ಲಾ ಈಗ ಹೆಂಗೆ ಬಿಡ್ತೀನಿ... ಅಂತ ಹೇಳಿಯೇ ಬಿಡುತ್ತಿದ್ದರು. ರಿಲೀಸು ಮಾಡಿದ ಮೇಲೆ ಹೆಂಗೆ? ಅಂತ ಮುಖ ನೋಡಿ ಶಭಾಸುಗಿರಿಯನ್ನೂ ಎಕ್ಸ್‌ಪೆಕ್ಟು ಮಾಡುತ್ತಿದ್ದರು. ಗೆಳೆತನದ ಮುಂದೆ ಎಲ್ಲವೂ ಮಾಫಿ... ನೀನು ಬಿಡಮ್ಮಾ, ಪ್ರತಿಯೊಂದರಲ್ಲೂ ಡಿಫರೆಂಟು ಅಂತ ಅವನನ್ನು ಅಟ್ಟಕ್ಕೇರಿಸುತ್ತಿದುದಲ್ಲದೆ ಅವನು ಹರಿಬಿಟ್ಟ ಅಪಾನವಾಯುವನ್ನು ಸೈಲೆಂಟಾಗಿ ತಕರಾರಿಲ್ಲದಂತೆ ಸಹಿಸಿಕೊಂಡು ಸೇವಿಸುತ್ತಿದ್ದುದು ನಮ್ಮ ಕರ್ಮವೂ ಆಗಿತ್ತು.

ಇತರರು ಕುಮಾರನಂತಲ್ಲ.